ವಿಜಯವಾಣಿ
ಸೋಮವಾರ • 25 ಮೇ 2015



ಮೊದಲ ಪುಟದಿಂದ...

# ತುಂತುರು... ಇಲ್ಲಿ ನೀರಾ ಹಾಡು...

ನೀರಾದಲ್ಲಿ ಫೈಟೋಕೆಮಿಕಲ್ಸ್‌ಗಳಾದ ಖನಿಜಗಳು, ವಿಟಮಿನ್‌ಗಳು, ಆ್ಯಂಟಿಆಕ್ಸಿಡೆಂಟ್‌ಗಳು ಹೆಚ್ಚಿರುತ್ತವೆ. ಆದ್ದರಿಂದ ಈ ತಾಜಾ ನೀರಾವನ್ನು ಪಾನೀಯವಾಗಿ ಕುಡಿಯುವುದು ಒಳ್ಳೆಯದು. ಇದರಿಂದ ಅನೇಕ ಬಗೆಯ ಉತ್ಪನ್ನಗಳನ್ನು ತಯಾರಿಸಬಹುದು. ಸಿಹಿ ನೀರಾ ಬೆಲ್ಲದ ಗ್ಲೈಸಮಿಕ್ ಇಂಡೆಕ್ಸ್ (ಜಿಐ) 35. ಆದ್ದರಿಂದ ನೀರಾ ಬೆಲ್ಲವನ್ನು ವಿಶೇಷವಾಗಿ ಮಧುಮೇಹಿಗಳಿಗೆ 'ಡಯಾ ಸಕ್ಕರೆ' ಎಂದು ಮಾರಾಟ ಮಾಡಬಹುದು. ಫಿಲಿಪ್ಪೀನ್ಸ್‌ನ ಆಹಾರ ಮತ್ತು ಪೋಷಕಾಂಶ ಸಂಶೋಧನಾ ಸಂಸ್ಥೆಯು ನಡೆಸಿದ ಅಧ್ಯಯನದಲ್ಲಿ ಈ ವಿಚಾರ ಬಹಿರಂಗಗೊಂಡಿದೆ.

**ರೈತರಿಗೆ ಲಾಭ:** ಸಿಹಿ ನೀರಾ ನೀತಿಯ ಜಾರಿಯಿಂದ 100 ತೆಂಗಿನ ಮರಗಳನ್ನು ಹೊಂದಿರುವ ರೈತನಿಗೆ ಪ್ರತಿ ತಿಂಗಳು 3,37,500ರೂ. ಗಳಿಸಲು ಸಾಧ್ಯ ಎಂದು ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಸಂಸ್ಥೆ ತಿಳಿಸಿದೆ.

ಸಿಹಿ ನೀರಾ ಉತ್ಪಾದನೆಯಿಂದ ರೈತರಿಗೆ ಹೆಚ್ಚಿನ ಲಾಭವಿರುವುದರಿಂದ ಕಡಿಮೆ ಲಾಭದ ಹೆಂಡ ಉತ್ಪಾದನೆಗೆ ರೈತರು ಮುಂದಾಗುವುದಿಲ್ಲ. ಸಿಹಿ ನೀರಾ ನೀತಿ ಜಾರಿಗೆ ತರುವುದರಿಂದ ಅಬಕಾರಿ ಆದಾಯಕ್ಕೆ ಯಾವುದೇ ಧಕ್ಕೆ ಆಗುವುದಿಲ್ಲ. ಕೇರಳ ಮಾದರಿಯಲ್ಲಿ ಸಿಹಿ ನೀರಾ ನೀತಿ ಜಾರಿಗೆ ತರುವುದರಿಂದ ತೆಂಗು ಉತ್ಪಾದಕರ ಕಂಪನಿಗಳಿಗೆ ಮಾತ್ರ ಸಿಹಿ ನೀರಾ ಉತ್ಪಾದನೆಗೆ ಅನುಮತಿ ನೀಡಬಹುದು. ಈ ಕಂಪನಿಗಳು ಕೂಡ 1956ರ ಕಂಪನಿಗಳ ನೋಂದಣಿ ಕಾಯ್ದೆಯಡಿ ನೋಂದಣಿಯಾಗಿರುತ್ತವೆ. ಇವುಗಳು ಕಾಯ್ದೆ ಮೀರಿದರೆ ಸರ್ಕಾರಕ್ಕೆ ನಿಯಂತ್ರಿಸಲು ಸುಲಭವಾಗುತ್ತದೆ. ತೆಂಗು ಉತ್ಪಾದಕರ ಕಂಪನಿಗಳು ಸಾರ್ವಜನಿಕ ಸಂಸ್ಥೆಗಳಾಗಿರುವುದರಿಂದ ಯಾವುದೇ ಕಾರಣದಿಂದ ಸಿಹಿ ನೀರಾ ನೀತಿಯ ಮಿತಿಗಳನ್ನು ಮೀರುವುದಿಲ್ಲ.

**ಸರ್ಕಾರಕ್ಕೆ ಲಾಭವೇನು?:** ಶೇ. ಒಂದರಷ್ಟು ತೆಂಗಿನ ಮರಗಳಿಂದ ನೀರಾ ಇಳಿಸಿ ಉತ್ಪನ್ನಗಳನ್ನು ತಯಾರಿಸಿದರೆ 2,250 ಕೋಟಿ ರೂ. ವರಮಾನವು ಸರ್ಕಾರದ ಬೊಕ್ಕಸಕ್ಕೆ ಬರಲಿದೆ. ಶೇ.10ರಷ್ಟು ತೆಂಗಿನ ಮರಗಳಿಂದ ನೀರಾ ಇಳಿಸಿದರೆ ಕರ್ನಾಟಕದಾದ್ಯಂತ ಐದು ಲಕ್ಷ ಹಸಿರು ಉದ್ಯೋಗಗಳು ಪ್ರಾರಂಭವಾಗುತ್ತವೆ. ರಾಜ್ಯ ಸರ್ಕಾರಕ್ಕೆ 22,500 ಕೋಟಿ ರೂ. ಆದಾಯ ಬರಲಿದೆ ಎಂದು ತೆಂಗು ಅಭಿವೃದ್ಧಿ ಮಂಡಳಿ ಲೆಕ್ಕ ಹಾಕಿದೆ.

**ಕೇರಳದಲ್ಲಿ ನಡೆಯುತ್ತಿರುವುದೇನು?:** 2014ರ ಡಿಸೆಂಬರ್ ವೇಳೆಗೆ ಕೇರಳದ ಹದಿನಾಲ್ಕು ಜಿಲ್ಲೆಗಳಿಂದ 173 ತೆಂಗು ಉತ್ಪಾದಕರ ಒಕ್ಕೂಟಗಳು ನೀರಾ ಉತ್ಪಾದನೆಗೆ ಅಬಕಾರಿ ಇಲಾಖೆಯಲ್ಲಿ ಹೆಸರು ನೋಂದಾಯಿಸಿವೆ. ಅವುಗಳಲ್ಲಿ 64 ಒಕ್ಕೂಟಗಳಿಗೆ ನೀರಾ ಮತ್ತು ಅದರ ಉತ್ಪನ್ನಗಳ ತಯಾರಿಗೆ ಪರವಾನಗಿ ನೀಡಲಾಗಿದೆ. ಪರವಾನಗಿ ಪಡೆದ ಬಹುತೇಕ ಎಲ್ಲ ಒಕ್ಕೂಟಗಳೂ ನೀರಾ ಸಂಸ್ಕರಣ ಘಟಕಕ್ಕಾಗಿ ಭೂಮಿ ಖರೀದಿಸಿವೆ. ಕೆಲವು ಒಕ್ಕೂಟಗಳು ನೀರಾ ಸಂಸ್ಕರಣ ಘಟಕದ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿವೆ. 1,303 ಮರಗಳಿಂದ ನೀರಾ ಇಳಿಸಲಾಗುತ್ತಿದೆ. ಆಧುನಿಕ ರೀತಿಯಲ್ಲಿ ನೀರಾ ಇಳಿಸಲು 791 ಜನರನ್ನು ತರಬೇತಿಗೊಳಿಸಲಾಗಿದೆ. ಇಳಿಸಿದ ನೀರಾವನ್ನು ಕೇರಳದ ಅನೇಕ ಕಡೆ ಮಾರಾಟ ಮಾಡಲಾಗುತ್ತಿದೆ.

ಜಗತ್ತಿನ ತೆಂಗು ಬೆಳೆಯುವ 94 ದೇಶಗಳಲ್ಲಿ ಎಲ್ಲಿಯೂ ಇಂತಹ ನೀತಿಗಳಿಲ್ಲ. ಭಾರತದ ಶೇ.90 ರಷ್ಟು ತೆಂಗು ಬೆಳೆಯುವ ದಕ್ಷಿಣ ರಾಜ್ಯಗಳಲ್ಲಿ ಕೇರಳ ಮತ್ತು ತಮಿಳುನಾಡು ತಮ್ಮ ನಿಲುವು ಬದಲಿಸಿಕೊಂಡು ಸಿಹಿ ನೀರಾ ನೀತಿಯನ್ನು ಜಾರಿಗೆ ತಂದಿವೆ. ದೇಶದಲ್ಲಿಯೇ ತೆಂಗು ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿರುವ ಕರ್ನಾಟಕದಲ್ಲಿ ಮಾತ್ರ ಅಬಕಾರಿ ಇಲಾಖೆ ಮತ್ತು ರೈತರಲ್ಲಿ ತಪ್ಪು ಗ್ರಹಿಕೆಗಳಿರುವ ಕಾರಣದಿಂದ ಅಪಾರ ಸಾಧ್ಯತೆಗಳಿರುವ ನೀರಾ ವಲಯ ಪ್ರಾರಂಭವಾಗೇ ಇಲ್ಲ. ರೈತ ಸಂಘದ ಹೋರಾಟಗಳಿಂದ ಅಬಕಾರಿ ಇಲಾಖೆಯ ಅನುಮಾನಗಳು ಹೆಚ್ಚುತ್ತಿವೆ. ಎಲ್ಲರೂ ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಿದೆ.

## ಏನಿದು ಸಿಹಿ ನೀರಾ?

ನೀರಾ ಎಂದರೆ ಇದು ಹುಳಿ ಬಂದ ಹೆಂಡ ಅಲ್ಲ. ತೆಂಗಿನ ಹೊಂಬಾಳೆಯಿಂದ ತೆಗೆಯುವ ಸಿಹಿ ರಸ. ನೀರಾ ಒಂದು ಆರೋಗ್ಯಕರ ಪೇಯ. ಇದನ್ನು ಸಿಹಿ ಪಾನೀಯವಾಗಿ ಮಾರಾಟ ಮಾಡಬಹುದು. ಈ ದಿಸೆಯಲ್ಲಿ ದಾಪುಗಾಲು ಇಟ್ಟಿರುವ ಕೇರಳ ರಾಜ್ಯವು ತೆಂಗು ಆಧಾರಿತ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಬೆಂಬಲ ನೀಡುತ್ತಿದೆ. ಕೇರಳ ಸರ್ಕಾರವು ನೀರಾವನ್ನು ಇಳಿಸಲು ಅನುಮತಿ ನೀಡಿದೆ. ಅದು ಸಿಹಿ ನೀರಾ ಪಾಲಿಸಿಯನ್ನು 2014ರ ಮಾರ್ಚ್ 2ರಂದು ಜಾರಿಗೆ ತಂದಿದೆ. ಅದರಂತೆ ನೀರಾ ಇಳಿಸಲು ಮತ್ತು ಅದರ ಉತ್ಪನ್ನಗಳನ್ನು ಸಿದ್ಧಗೊಳಿಸಲು ಅದು ತೆಂಗು ಉತ್ಪಾದಕರ ಸಂಘ, ಒಕ್ಕೂಟ, ಕಂಪನಿಗಳಿಗೆ ಅನುಮತಿ ನೀಡಿದೆ. ಕರ್ನಾಟಕದಲ್ಲಿ ನೀರಾ ಹೋರಾಟಕ್ಕೆ ರೈತರ ಹತ್ಯೆ ನಡೆದು ಹದಿಮೂರು ವರ್ಷಗಳು ಸಂದಿವೆ. ಇಂದಿಗೂ ನೀರಾ ಇಳಿಸಲು ಅನುಮತಿ ಇಲ್ಲ. ಇಂತಹ ಕಾಯ್ದೆಗಳು ಜಗತ್ತಿನ ತೆಂಗು ಉತ್ಪಾದಿಸುವ 94 ದೇಶಗಳಲ್ಲಿ ಎಲ್ಲಿಯೂ ಇಲ್ಲ.